

# ಇದೋ ನೋಡಿ ಕಣ್ಣು ರೆಪ್ಪೆಯ ಕೂದಲು!

ನೂರು ಮಾತುಗಳನ್ನು ಕಣ್ಣುಗಳು ಹೇಳುತ್ತವೆ ಎನ್ನುತ್ತೇವೆ. ಕಣ್ಣುಗಳು ಮುಖದ ಅಂದಕ್ಕೆ ಪೂರಕ. ಚಿತ್ರದಲ್ಲಿರುವ ಚೀನಾ ಹುಡುಗಿಯ ಕಣ್ಣುಗಳನ್ನು ಕಣ್ಣು ನೋಡಿ. ಇವಳ ಕಣ್ಣು ರೆಪ್ಪೆಯ ಉದ್ದವಾದ ಕೂದಲುಗಳಿಗಾಗಿ ಈಕೆ 2009ರ ಡಿಸೆಂಬರ್ 29 ರಂದು ಗಿನ್ನೆಸ್ ದಾಖಲೆಗೆ ಸೇರಿದ್ದಾಳೆ. ಕಣ್ಣು ರೆಪ್ಪೆಯ ಈ ಕೂದಲಿನ ಬೆಳವಣಿಗೆಗೆ ಕಾರಣ ಇವಳು ಸೇವಿಸುತ್ತಿದ್ದ ಮಾದಕ ವಸ್ತುವಿನ ಅಡ್ಡಪರಿಣಾಮ ಇರಬಹುದು. ಇದರಿಂದ ಇವಳು ತುಂಬ ವಿಲಕ್ಷಣವಾಗಿಯೂ ಕಾಣಿಸುತ್ತಾಳೆ.

ಇವಳ ಫೋಟೋಗಳನ್ನು ಅಂತರ್ಜಾಲದಲ್ಲಿ ನೋಡಿದ ಬಹಳಷ್ಟು ಜನರು ಇವಳು ಈ ಸುಂದರ ಜಗತ್ತನ್ನು ಹೇಗೆ ನೋಡುತ್ತಾಳೆ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ! ಇನ್ನು ಕೆಲವರು ಇವಳು ಕಣ್ಣು ರೆಪ್ಪೆಯ ಕೂದಲನ್ನು ಬಾಚಿಕೊಳ್ಳುತ್ತಿರಬೇಕು. ಬಾಚಿಕೊಳ್ಳುವಾಗ ಕಣ್ಣಿಗೆ ತೊಂದರೆಯಾಗದಂತೆ ಜಾಗ್ರತೆ ವಹಿಸಬೇಕು. ಸಾಧ್ಯವಾದರೆ ಚಿಕ್ಕ ರಿಬ್ಬನ್‌ನಿಂದ ಕಟ್ಟಿಕೊಳ್ಳಬೇಕು ಎಂದು ಸಲಹೆಯನ್ನೂ ನೀಡಿದ್ದಾರೆ.

■ ಪ್ರಕಾಶ ಎಸ್. ಮನ್ನಂಗಿ

